ನಿಯಮ ೩೩೪ರ ಮೇರೆಗೆ

(೧) ಹುಬ್ಬಳ್ಳಿ ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿಯ ಕೋಡಿನ ಗ್ರಾಮದ ಹತ್ತಿರ ಸೇತುವೆಯು ಮುಳುಗಡೆಯಿಂದ ಜನರಿಗೆ ತೊಂದರೆ

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೆ ಒಂದು ಸಂತೋಷದ ಸುದ್ದಿ ಏನೆಂದರೆ ನಿಯಮ ೩೩೪ ರಲ್ಲಿ ಇವತ್ತು ೧೩ಕ್ಕೆ ಉತ್ತರ ಕೊಟ್ಟಿದ್ದಾರೆ. ನಿಯಮ ೩೩೪ಕ್ಕೆ ಉತ್ತರ ಬರುವುದಿಲ್ಲ ಎಂದು ಹೇಳಿದಿರಲ್ಲ ಈಗ ಉತ್ತರ ಬರಲಿಕ್ಕೆ ಪ್ರಾರಂಭವಾಗಿದೆ. ಮಾನ್ಯ ಸಂಸದೀಯ ಮಂತ್ರಿಗಳು ಕ್ರಮ ತೆಗೆದುಕೊಳ್ಳಲಿಕ್ಕೆ ಹೊರಟಿದ್ದಾರೆ.

x x x x x x x x

ಶ್ರೀ ಬಿ. ವಿ. ತುಂಗಲ್ (ಬೀಳಗಿ).—ಮಾನ್ಯ ಅಧ್ಯಕ್ಷರೆ ಹುಬ್ಬಳ್ಳಿ-ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿಯ ಮೇಲೆ ಕೋಡಿನ ಗ್ರಾಮದ ಹತ್ತಿರ ಕೃಷ್ಣಾ ನದಿಗೆ ಮಹಾಪೂರ ಬಂದಿದೆ. ಇಲ್ಲಿರುವ ಬ್ರಿಟಿಷ್ ಕಾಲದ ಚಿಕ್ಕ ಸೇತುವೆ ನೀರಿನಲ್ಲಿ ಎರಡು ತಿಂಗಳುಗಳಪರೆಗೆ ಮುಳುಗುವುದರಿಂದ ವಿಜಾಪುರ ಹಾಗೂ ಬಾಗಲಕೋಟೆ ಭಾಗಗಳ ಜನರಿಗೆ ಸಂಪರ್ಕ ಕಡಿದು ಹೋದಂತಾಗುತ್ತದೆ. ಜನರು ಆಗ ಅನಿವಾರ್ಯವಾಗಿ ಅಪಲಂಬಿಸಬೇಕಾದ ದಾರಿಯಿಂದರೆ ಈ ಜಲಮಾರ್ಗ ಮಾತ್ರ.

ಕೋಡಿನ ಗ್ರಾಮದ ಮುಂದಿರುವ ಕೃಷ್ಣಾ ನದಿಯಲ್ಲಿ ಜನರನ್ನು ಆಚೆ ಈಚೆ ಸಾಗಿಸಲು ವಿದ್ಯುತ್ ಚಾಲಿತ ದೋಣಿ ಇದೆ. ಈ ವರ್ಷದ ಜೂನ್ ತಿಂಗಳಲ್ಲಿ ಈ ದೋಣಿಯನ್ನು ನಡೆಸುವ ಸಿಬ್ಬಂದಿಯನ್ನು ಇಲ್ಲಿಂದ ಎತ್ತುಗಡೆ ಮಾಡಲಾಗಿದ್ದು, ಈವರೆಗೂ ಅಲ್ಲಿ ಹೊಸ ಸಿಬ್ಬಂದಿ ಬಂದಿಲ್ಲವೆಂದು ತಿಳಿದುಬಂದಿದೆ. ಇದರಿಂದ ದೋಣಿಯು ಸಾರಿಗೆ ಬಂದ್ ಆಗಿ ನದಿಯ ಎರಡೂ ಕಡೆಗೆ ಇರುವ ನೂರಾರು ಹಳ್ಳಿಗಳ ಜನರಿಗೆ ಅತ್ಯಂತ ತೊಂದರೆಯಾಗಿದ್ದು ಈ ಕುರಿತು ನಾನು ಮಾರ್ಚಿ ತಿಂಗಳಲ್ಲೇ ಬಂದರು ಇಲಾಖೆಯ ಮಂತ್ರಿಗಳ ಗಮನ ಸೆಳೆದಿದ್ದರೂ ಈವರೆಗೆ ಯಾವುದೇ ಕೆಲಸವಾಗಿಲ್ಲ. ಈಗ ಅಲ್ಲಿ ಲಾಂಚ್ ನಡೆಸಲು ಏನು ವ್ಯವಸ್ಥೆಯಾಗಿದೆ ? ಈ ಕುರಿತು ಕೈಕೊಂಡ ಕ್ರಮಗಳೇನೆಂಬುದರ ಕುರಿತು ಮಾನ್ಯ ಬಂದರು ಇಲಾಖೆಯ ಸಚಿವರಾದ ಶ್ರೀ ಬೈರೇಗೌಡರ ಗಮನವನ್ನು ತೀವ್ರವಾಗಿ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಆ ಸಭೆಯಲ್ಲಿದ್ದಾರೆ.

(೨) ಖಾಸಗೀ ಟಿಂಪೊ ಮಾಲೀಕರ ಅಸಹಕಾರದಿಂದ ಜಮಖಂಡಿ ಮತ್ತಿತರ ಕಡೆಗಳಲ್ಲಿ ಸಾರ್ವಜನಿಕರಿಗೆ ತೊಂದರೆ

ಶ್ರೀ ಜಿ. ಎಸ್. ಬಾಗಲಕೋಟಿ.—ಸನ್ಮಾನ್ಯ ಅಧ್ಯಕ್ಷರೆ, ಖಾಸಗಿ ಟಿಂಪೋಗಳು, ಮೆಟಡಾರ್ ಮಾಲೀಕರ ಅಸಹಕಾರದಿಂದ ಔದ್ಯೋಗಿಕ ನಗರಗಳಾದ ಜಮಖಂಡಿ, ಬನಹಟ್ಟಿ, ರಬಕವಿ, ಲೋಯದಾಳ್, ಮಹಾಲಿಂಗಪುರ ನಗರಗಳ ಮಧ್ಯೆ ಪ್ರಯಾಣ ಮಾಡುವ ಪ್ರಯಾಣಿಕರು ಗಂಭೀರ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಆದ್ದರಿಂದ ಈ ನಗರಗಳ ಮಧ್ಯೆ ಸಿಟಿ ಬಸ್ ಅಥವಾ ಹೆಚ್ಚಿನ ಬಸ್ ಓಡಾಡಿಸುವ ವ್ಯವಸ್ಥೆ ಮಾಡುವ ಬಗ್ಗೆ ಮಾನ್ಯ ಸಾರಿಗೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೆ, ಸರ್ಕಾರವು ರಹದಾರಿಯನ್ನು ಪಡೆಯದೆ ಮತ್ತು ರಹದಾರಿಯನ್ನು ಉಲ್ಲಂಘಿಸಿ ಸಂಚರಿಸುವ ಖಾಸಗಿ ಟಿಂಪೊಗಳು ಹಾಗೂ ಮೆಟಡಾರ್ ವ್ಯಾನುಗಳ ಪ್ರಯಾಣವನ್ನು ನಿಲ್ಲಿಸಿರುವುದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಜನಗಳಿಗೆ ತೊಂದರೆಯಾಗದಂತೆ ಎಲ್ಲಾ ಮಾರ್ಗಗಳಲ್ಲೂ ಹೆಚ್ಚು ಹೆಚ್ಚು ಬಸ್ಸುಗಳನ್ನು ಓಡಿಸುತ್ತಿದೆ. ಅದೇರೀತಿ ಜಮಖಂಡಿ, ಬನಹಟ್ಟಿ, ರಬಕವಿ, ಬೀರೆದಾಳ್, ಮಹಾಲಿಂಗಪುರ ಮುಂತಾದ ನಗರಗಳಲ್ಲೂ ಸಹ ಸಂಚಾರವನ್ನು ಅನುಸರಿಸಿ, ಹೆಚ್ಚು ಬಸ್ಸನ್ನು ಓಡಿಸಲಾಗುತ್ತಿದೆ. ಜಮಖಂಡಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಡಿಪೋ ಇದ್ದು ಡಿಪೋ ಮತ್ತು ಬಸ್‌ಸ್ಟ್ಯಾಂಡ್ ಪಕ್ಕಪಕ್ಕದಲ್ಲಿಯೇ ಇರುವುದರಿಂದ ಡಿಪೋ ಮ್ಯಾನೇಜರ್‌ರವರು ಸಮೀಕ್ಷೆ ನಡೆಸಿ ಅಪಶ್ಯಕತೆ ಕಂಡುಬಂದಲ್ಲಿ ಹೆಚ್ಚು ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಅದಲ್ಲದೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ಕಛೇರಿಯಿಂದ ಎಲ್ಲಾ ವಿಭಾಗಗಳಿಗೆ ನಿರ್ದೇಶನವನ್ನಿತ್ತು ಬಸ್ಸಿನ ಸಂಚಾರ ಸ್ಥಗಿತಗೊಂಡಲ್ಲಿ ಅಥವಾ ಕಡಿಮೆ ಎಂದು ಕಂಡು ಬಂದಲ್ಲಿ ಆ ಮಾರ್ಗಗಳಲ್ಲಿ ಹೆಚ್ಚಿನ ಬಸ್ಸನ್ನು ಓಡಿಸಬೇಕೆಂದು ಆದೇಶವನ್ನು ನೀಡಲಾಗಿದೆ.

ಈಗಾಗಲೇ ಈ ಮೇಲ್ಕಂಡ ನಗರಗಳಿಗೆ ಸಾಕಷ್ಟು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಓಡಿಸಲಾಗುತ್ತಿತ್ತು, ಸರಾಸರಿ ಒಂದು ಗಂಟೆಗೊಮ್ಮೆ ಈ ಊರುಗಳಿಗೆ ಸಂಚಾರವನ್ನು ಏರ್ಪಡಿಸಲಾಗಿದೆ. ಅವಶ್ಯಕತೆ ಕಂಡು ಬಂದಲ್ಲಿ ಇನ್ನೂ ಹೆಚ್ಚಿನ ಬಸ್ಸುಗಳ ವ್ಯವಸ್ಥೆಯನ್ನು ಏರ್ಪಡಿಸಲಾಗುವುದು.

ಈ ಮೇಲೆ ಹೇಳಿದ ಸ್ಥಳಗಳು ನಗರ ಪ್ರದೇಶಗಳಾಗದೇ ಇರುವುದರಿಂದ ನಗರ ಸಾರಿಗೆ ಬಸ್ಸನ್ನು ಓಡಿಸುವ ಔಚಿತ್ಯ ಕಂಡು ಬರುವುದಿಲ್ಲ. ಆದರೂ ಸಹಾ ಅವಶ್ಯಕತೆ ಕಂಡುಬಂದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳನ್ನು ಓಡಿಸಿ ಜನಗಳಿಗೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳಲಾಗುವುದು.

ಈಗಾಗಲೇ ಜಮಖಂಡಿಯಲ್ಲಿ ೬೫ ಬಸ್ಸುಗಳಿದ್ದು ಅವಶ್ಯಕತೆ ಕಂಡುಬಂದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳನ್ನು ಓಡಿಸಲಾಗುವುದು.

(೩) ರಾಜ್ ಸಮಿತಿ ವರದಿಯನ್ನು ಸಭೆಯ ಮುಂದೆ ಇಡುವುದು

SRI K. H. PATIL.—Sir, I draw the attention of the Hon'ble Minister for Education to the fact that Raj Commission which was constituted in 1978 to review the working of the Universities has submitted its statutory report which ought to have been placed on the floor of the House together with a memorandum indicating the action taken as require under sub-section (6) of Section 61. It has not been done so. Does it not embarass the Chancellor to take such action as he deems fit under sub-section (5) of Section 61 of the Act ?

ಶ್ರೀ ಎಂ. ರಘುಪತಿ.—ಮಾನ್ಯ ಸಭಾಧ್ಯಕ್ಷರೆ, ಈ ಒಂದು ರಾಜ್ ಕಮಿಷನ್ ವರದಿಯನ್ನು ದಿನಾಂಕ ೩೦-೭-೧೯೮೨ ರಂದು ಈ ಸಭೆಯ ಮುಂದಿಡಲಾಗಿದೆ. ಅದುದರಿಂದ ಮಾನ್ಯ ಹಿರಿಯ ಸದಸ್ಯರಾದ ಕೆ. ಪೆಚ್. ಪಾಟೀಲರಿಗೆ ಒಂದು ಕಾಪಿಯನ್ನು ಕಳಿಸಿಕೊಡುತ್ತೇನೆ.

(೪) ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಸಿಲ್ಕ್ ಜೂಟ್ ಕೊಂಡುಕೊಳ್ಳುವುದನ್ನು ನಿಲ್ಲಿಸಿದ್ದರ ಬಗ್ಗೆ

ಶ್ರೀ ಬಿ. ರಾಜೂಗೌಡ.—ನಾನು ನಿನ್ನೆ ಪ್ರಸ್ತಾಪ ಮಾಡಿದ ವಿಷಯಕ್ಕೆ ಉತ್ತರ ಬರಲಿಲ್ಲ. ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ (ಕೆ.ಎಸ್.ಐ.ಸಿ.) ನವರು ರೇಷ್ಮೆ ನಟ್ಟಿ (ಸಿಲ್ಕ್ ಜೂಟ್)ನ್ನು ಏಕಾಏಕಿ ಕೊಂಡುಕೊಳ್ಳುವುದನ್ನು ನಿಲ್ಲಿಸಿರುವುದರಿಂದ ಸಿಲ್ಕ್ ಜೂಟ್‌ನ ಧಾರಣೆಯು ಬಹಳ ಕೆಳಗಡೆ ಇಳಿದಿದ್ದು, ರೇಷ್ಮೆ ನೂಲು ಬಿಚ್ಚಿಸುವವರಿಗೆ ಬಹಳ ನಷ್ಟ ಅನುಭವಿಸಿ, ರೇಷ್ಮೆ ನೂಲು ಬಿಚ್ಚಿಸುವ ಕೆಲಸವನ್ನು ನಿಲ್ಲಿಸಲು ತೀರ್ಮಾನ ಕೈಗೊಂಡಿದ್ದಾರೆ. ಇವರುಗಳು ಕೈಕಟ್ಟಿ ಕುಳಿತರೆ, ಗೂಡು ಬೆಳೆಯುವ ರೈತರಿಗೂ, ರೇಷ್ಮೆ ಮೊಟ್ಟೆ ಉತ್ಪಾದಕರಿಗೂ ತೊಂದರೆಯಾಗಿ, ಈ ಉದ್ಯಮವೇ ಬೇಕಾಗುವ ಸಂಭವ ಉದ್ಭವಿಸಿರುವುದರಿಂದ, ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಅವಲೋಕಿಸಬೇಕೆಂದು ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಮತ್ತು ಹಿಂದೆ ಇದ್ದಂತೆ ಸಿಕ್ಕಿ, ಶಿಕ್ಕಂತೆ ರಫ್ತು ಮಾಡಲು ಅವಕಾಶ ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಚಿವರಿಲ್ಲ, ಅವರಿಗೆ ಉತ್ತರ ಕೊಡಿಸುವುದಕ್ಕೆ ಹೇಳುತ್ತೇನೆ.

(೫) ಸಂಕೇಶ್ವರದ ಹಿಂದುಸ್ಥಾನ್ ಲೇಟೆಕ್ಸ್ ಇಂಡಿಯಾ ಸಂಸ್ಥೆ ಕನ್ನಡಿಗರನ್ನು ನೌಕರಿಗೆ ನೇಮಿಸುವ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಸಂಕೇಶ್ವರ ಮಾತದಾರ ಕ್ಷೇತ್ರದಲ್ಲಿ ಹಿಂದುಸ್ಥಾನ್ ಲೇಟೆಕ್ಸ್ ಇಂಡಿಯಾ ಲಿಮಿಟೆಡ್, ಸಂಸ್ಥೆಯ ಕಟ್ಟಡ ಕಾರ್ಯವು ಪ್ರಾರಂಭವಾಗಿದ್ದು ಈ ಸಂಸ್ಥೆಯಿಂದ ಸಿಬ್ಬಂದಿ ವರ್ಗವನ್ನು ತುಂಬಿಕೊಳ್ಳಲು ಶುರುವಾಗಿದೆ ಎಂದು ತಿಳಿದುಬಂದಿದೆ.